ಶ್ರೀ ಹೆಚ್. ಡಿ. ದೇವೇಗೌಡ.—(ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಬಂದಿದೆ.

ಆ) ಈ ಯೋಜನೆಯು ತಾಂತ್ರಿಕವಾಗಿ ಸೂಕ್ತವಲ್ಲವೆಂದು ತಿಳಿದು ಬಂದಿರುವ ಕಾರಣ, ಉತ್ತರ ಉದ್ಭವಿಸುವುದಿಲ್ಲ.

ಇ) ಆ ಪ್ರಶ್ನೆಯ ಉತ್ತರದಿಂದ ಉದ್ಭವಿಸುವುದಿಲ್ಲ.

ವಿಷಯ : ನಾಯಕ ಜನಾಂಗವನ್ನು ಪರಿಶಿಷ್ಟ ವರ್ಗದ ಪಟ್ಟಿಯಲ್ಲಿ ಸೇರಿಸುವುದು

ಪ್ರ. ಸಂಖ್ಯೆ 557 (1480) ಶ್ರೀ ಎನ್. ಜಿ. ನಾಯ್ಕ (ಮೊಳಕಾಲ್ಮೂರು) ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

ಅ) 1978ರಲ್ಲಿ ಸರ್ಕಾರವು 'ನಾಯಕ' ಎಂಬ ಜಾತಿಯನ್ನು ಹಿಂದುಳಿದ ಬುಡಕಟ್ಟು ಜನಾಂಗದ ಪಟ್ಟಿಯಿಂದ ತೆಗೆದು ಪರಿಶಿಷ್ಟ ವರ್ಗಕ್ಕೆ ಸೇರಿದೆಯೆಂದು ಮತ್ತು ಅದರ ಸಮಾನ ಜಾತಿಗಳನ್ನು ಹಿಂದುಳಿದ ಬುಡಕಟ್ಟು ಜನಾಂಗದ ಪಟ್ಟಿಯಲ್ಲಿ ಸೇರಿದೆಯೆಂದು ಹೇಳಿರುವುದು ನಿಜವೆ ;

ಆ) ಹಾಗಿದ್ದಲ್ಲಿ 'ನಾಯಕ' ಜಾತಿಯ ಸರಿಸಮಾನ ಹೆಸರುಗಳನ್ನು ನಾಯಕ ಜನಾಂಗಕ್ಕೆ ಸೇರಿದವೆಂದು ಒಪ್ಪಿದಂತಾಗಲಿಲ್ಲವೇ ಮತ್ತು ಈ ಸರಿಸಮಾನ ಹೆಸರುಗಳೆಲ್ಲಾ 'ನಾಯಕ' ಜಾತಿಗೆ ಸೇರಿದ ಪರಿಶಿಷ್ಟ ವರ್ಗವೆಂದು ಪರಿಗಣಿಸಬೇಕಲ್ಲವೆ';

ಇ) ಹಾಗಿದ್ದಲ್ಲಿ, ಇಲ್ಲಿಯವರೆಗೂ ಈ ವಿಷಯದ ಬಗ್ಗೆ ತೀರ್ಮಾನ ಮಾಡದಿರುವುದಕ್ಕೆ ಕಾರಣವೇನು ?

ಶ್ರೀಮತಿ ಚಂದ್ರಪ್ರಭಾ ಅರಸ್ (ಸಮಾಜ ಕಲ್ಯಾಣ ಸಚಿವೆ).—

ಅ) ನಿಜ.

ಆ) ಈ ಬಗ್ಗೆ ಅಂತಿಮ ತೀರ್ಮಾನ ಕೇಂದ್ರ ಸರ್ಕಾರದ್ದು. ರಾಜ್ಯ ಸರ್ಕಾರವು ಈ ಬಗ್ಗೆ ಪರಿಶೀಲನೆ ಮಾಡುತ್ತಿದೆ.

ಇ) ಮೇಲಿನ ಉತ್ತರದಿಂದ ಇದಕ್ಕೆ ಉತ್ತರ ಉದ್ಭವಿಸುವುದಿಲ್ಲ.

ವಿಷಯ : ಮೊಳಕಾಲ್ಮೂರು ತಾಲ್ಲೂಕಿನಲ್ಲಿ ರಂಗಯ್ಯನ ದುರ್ಗ ಯೋಜನೆ

ಪ್ರ. ಸಂಖ್ಯೆ 558 (1402) ಶ್ರೀ ಎನ್. ಜಿ. ನಾಯ್ಕ (ಮೊಳಕಾಲ್ಮೂರು) ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

ಅ) ಮೊಳಕಾಲ್ಮೂರು ತಾಲ್ಲೂಕಿನಲ್ಲಿ ರಂಗಯ್ಯನ ದುರ್ಗ ಯೋಜನೆಯನ್ನು ಮಂಜೂರ್ಮಾಡಿದ್ದಾರೆಯೆ ? ಹಾಗಿದ್ದಲ್ಲಿ ಈ ಯೋಜನೆ ಯಾವಾಗ ಪ್ರಾರಂಭವಾಯಿತು, ಹಾಗೂ ಇದರ ಅಂದಾಜು ವೆಚ್ಚ ಎಷ್ಟು :

ಆ) ಮೊಳಕಾಲ್ಮೂರು ಬರಗಾಲ ಪೀಡಿತ ಪ್ರದೇಶವಾಗಿರುವುದರಿಂದ ಸದರಿ ಯೋಜನೆಯನ್ನು ತ್ವರಿತವಾಗಿ ಪೂರ್ತಿಗೊಳಿಸಲಾಗುವುದೇ ?

ಶ್ರೀ ಆರ್. ಎನ್. ಲಕ್ಷ್ಮೀಪತಿ (ಸಣ್ಣ ನೀರಾವರಿ ರಾಜ್ಯ ಸಚಿವರು).—

ಅ) ಮಂಜೂರಾತಿಯನ್ನು ಇನ್ನೂ ನೀಡಬೇಕಾಗಿದೆ. ಈ ಯೋಜನೆಯು 1975–76ನೇ ಸಾಲಿನಲ್ಲಿ ಪ್ರಾರಂಭವಾಯಿತು. ಅಂದಾಜು ವೆಚ್ಚ 640 ಲಕ್ಷ ರೂ.ಗಳು (1982–83ರ ದರಗಳು).

ಆ) ಆದಷ್ಟು ಶೀಘ್ರವಾಗಿ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗಿದೆ.

ವಿಷಯ : ಶಹಬಾದ್ ಕ್ಷೇತ್ರದಲ್ಲಿ ನೀರಾವರಿ ಯೋಜನೆ

ಪ್ರ. ಸಂಖ್ಯೆ 559 (1568) ಶ್ರೀ ಕೆ. ಬಿ. ಶಾಣಪ್ಪ (ಶಹಬಾದ್) ಮಾನ್ಯ ಸಣ್ಣ ನೀರಾವರಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

ಅ. ಶಹಾಬಾದ್ ಕ್ಷೇತ್ರವು ಭೀಮಾನದಿ ಮತ್ತು ಕಾಗಿನಾ ನದಿ ದಂಡೆಗಳ ಉದ್ದಕ್ಕೂ ಹರಡಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ;

ಆ. ಭೀಮಾನದಿಯ ದಂಡೆಯ ಮೇಲೆ ಬರುವ ಯಾವ ಗ್ರಾಮಗಳಿಗೆ ಏತ ನೀರಾವರಿ ಯೋಜನೆಗಳನ್ನು ಕೈಗೊಳ್ಳಲಾಗಿದೆ ;

ಇ. ಉಳಂಡಗೀರಾ, ಕೊಲ್ಲೂರು, ಕುಂದನೂರ, (ತಾಲ್ಲೂಕಾ ಚಿತ್ರವು) ಮತ್ತು ನವಿ ನಿಣ್ಣೂರ ಮಾಯನಾಳ (ಗುಲ್ಬರ್ಗ ತಾಲ್ಲೂಕ್) ಇವುಗಳನ್ನು ಏತ ನೀರಾವರಿ ಯೋಜನೆಯಲ್ಲಿ ತೆಗೆದುಕೊಳ್ಳುವ ಸಾಧ್ಯತೆ ಇದೆಯೇ ಮತ್ತು ಪ್ರತಿಯೊಂದು ಹಳ್ಳಿಯ ಏತ ನೀರಾವರಿ ಯೋಜನೆಗೆ ತಗಲುವ ವೆಚ್ಚವೆಷ್ಟು ;

ಈ. 1984-85ನೇ ಸಾಲಿನಲ್ಲಿ ಯಾವ ಯಾವ ಗ್ರಾಮಗಳನ್ನು ಏತ ನೀರಾವರಿ ಯೋಜನೆಯಲ್ಲಿ ತೆಗೆದು ಕೊಳ್ಳಲಾಗುವುದು ?

ಶ್ರೀ ಆರ್. ಎನ್. ಲಕ್ಷ್ಮೀಪತಿ (ಸಣ್ಣ ನೀರಾವರಿ ರಾಜ್ಯ ಮಂತ್ರಿಗಳು).—

ಅ. ಹೌದು.

ಆ. 1. ಸೂಂತಿ ಏತ ನೀರಾವರಿ ಯೋಜನೆ
2. ಫಿರೋಜಬಾದ್ ಏತ ನೀರಾವರಿ ಯೋಜನೆ.

ಇ. ಪರಿಶೀಲನೆಯಲ್ಲಿದೆ.

ಈ, ಶಹಾಬಾದ್ ಕ್ಷೇತ್ರದಲ್ಲಿ 1984-85ನೇ ಸಾಲಿನ ಆಯವ್ಯಯದಲ್ಲಿ ಯಾವ ಏತ ನೀರಾವರಿ ಯೋಜನೆಯೂ ಸೇರಿಲ್ಲ.

ವಿಷಯ : ಸೇಡಂ ತಾಲ್ಲೂಕಿನಲ್ಲಿ ನೀರಾವರಿ ಕೆರೆಯಿಂದ ನೀರಿನ ಸೌಲಭ್ಯ ಒದಗಿಸುವುದು

ಪ್ರ. ಸಂಖ್ಯೆ 560 (1594) ಡಾ॥ ನಾಗರೆಡ್ಡಿ ಲಚಮಾರೆಡ್ಡಿ ಪಾಟೀಲ್ (ಸೇಡಂ) ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

ಅ. ಸೇಡಂ ತಾಲ್ಲೂಕಿನಲ್ಲಿರುವ ನೀರಾವರಿ ಕೆರೆ ಮತ್ತು ಅಣೆಕಟ್ಟುಗಳ ಸಂಖ್ಯೆ ಎಷ್ಟು :

ಆ. ಮತ್ತು ಅವುಗಳಿಂದ ನೀರಾವರಿಯಾಗುತ್ತಿರುವ ಜಮೀನಿನ ವಿಸ್ತೀರ್ಣವೆಷ್ಟು ? (ಪ್ರತಿಯೊಂದು ಕೆರೆ ಹಾಗೂ ಅಣೆಕಟ್ಟುಗಳಿಗೆ ಸಂಬಂಧಿಸಿದಂತೆ ವಿವರಗಳನ್ನೊದಗಿಸುವುದು) ?

ಶ್ರೀ ಆರ್. ಎನ್. ಲಕ್ಷ್ಮೀಪತಿ (ಸಣ್ಣ ನೀರಾವರಿ ರಾಜ್ಯ ಮಂತ್ರಿಗಳು).—

ಅ. 1. ಸಣ್ಣ ನೀರಾವರಿ ಕೆರೆಗಳು 48 ನಂ.
2. ಅಣೆಕಟ್ಟುಗಳು 32 ನಂ.

ಆ. ನೀರಾವರಿ ಜಮೀನಿನ ವಿಸ್ತೀರ್ಣ
1. ಸಣ್ಣ ನೀರಾವರಿ ಕೆರೆಗಳಿಂದ 1,674 ಹೆಕ್ಟೇರ್
2 ಅಣೆಕಟ್ಟುಗಳಿಂದ 951 ಹೆಕ್ಟೇರ್

ಒಟ್ಟು 2,625 ಹೆಕ್ಟೇರ್

L. A. Question No. 1594

Statement showing the list of M. I. Tanks and Anicuts and extent of Land Irrigate under them in Sedam Taluka.

Sl. No.	Name of M.I. Works		Extent of land irrigated (Hects)
1	2		3
	(A) M. I. Tanks		
1.	Kamreddy Kunta Ribbanpalli	....	6
2.	Pinonikunta Mallabad	....	6
3.	Pullankunta Ananthapur	....	10
4.	Nalla Kunta Anantapur	....	9
5.	Pujarikunta Bandopalli	....	11
6.	Mavinakunta Bandepalli	....	6
7.	Nagin Kuuta Bandepalli	....	8